**ಓ.ಎಸ್. ನಂ. 131/2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 31.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ನಾಲ್ಕು ಗಣಕೀಕೃತ ಪಹಣಿಗಳನ್ನು ನಿಪಿ1 ರಿಂದ ನಿಪಿ4 ಎಂದು, ಹದಿನೈದು ಕೈಬರಹದ ಪಹಣಿಗಳನ್ನು ನಿಪಿ5 ರಿಂದ ನಿಪಿ19 ಎಂದು, ಮೂರು ಮ್ಯುಟೇಶನ್ ರಿಜಿಸ್ಟರುಗಳನ್ನು ನಿಪಿ20 ರಿಂದ ನಿಪಿ22 ಎಂದು, ಎಂ.ಆರ್ 6/1987-88 ರ ದೃಢೀಕೃತ ನಕಲನ್ನು ನಿಪಿ23 ಎಂದು, ಆರ್.ಆರ್-5 ಮತ್ತು ಅರ್.ಆರ್-6 ರ ದೃಢೀಕೃತ ನಕಲನ್ನು ನಿಪಿ24 ಮತ್ತು ನಿಪಿ25 ಎಂದು, ಡಿಮ್ಯಾಂಡ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಪಿ26 ಎಂದು, ಓ.ಎಸ್ 106/2015 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲನ್ನು ನಿಪಿ27 ಮತ್ತು ನಿಪಿ28 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.